# ಡಿಸ್ಚಾಂಪ್ಸ್ ಎಂಬ ಚಾಂಪಿಯನ್

ಡಿಡಿಯರ್ ಡಿಸ್ಚಾಂಪ್ಸ್ – ಹೆಸರು ಉಚ್ಚರಿಸುವುದು ಸ್ವಲ್ಪ ಕಷ್ಟವೇ. ಆದರೆ ಈತನ ಹೆಸರು ಈಗ ಕ್ರೀಡಾ ಜಗತ್ತಿನ ಎಲ್ಲರ ನಾಲಿಗೆಯ ಮೇಲೆ ನಲಿದಾಡುತ್ತಿದೆ. ಕಳೆದ ವಾರ ಫಿಫಾ ಫುಟ್‌ಬಾಲ್ ವಿಶ್ವಕಪ್ ಎತ್ತಿ ಹಿಡಿದ ಫ್ರಾನ್ಸ್ ತಂಡದ ಹೆಡ್ ಕೋಚ್/ ಮ್ಯಾನೇಜರ್ ಈ ಡಿಸ್ಚಾಂಪ್ಸ್. ಒಬ್ಬ ವ್ಯಕ್ತಿ ಫುಟ್‌ಬಾಲ್ ತಂಡದ ನಾಯಕನಾಗಿ ವಿಶ್ವಕಪ್ ಗೆಲ್ಲುವುದು ಮತ್ತು ಅದೇ ದೇಶದ ತಂಡದ ಮ್ಯಾನೇಜರ್ ಆಗಿ ವಿಶ್ವಕಪ್ ಗೆಲ್ಲಿಸುವುದು– ಈ ಎರಡೂ ಸಾಧನೆಗಳನ್ನು ಮಾಡಿದ ದಾಖಲೆ ಈತನದ್ದು. 20 ವರ್ಷಗಳ ಹಿಂದೆ 1998ರಲ್ಲಿ ಫ್ರಾನ್ಸ್ ತಂಡದ ನಾಯಕನಾಗಿ ಇದೇ ಡಿಸ್ಚಾಂಪ್ಸ್, ಪ್ಯಾರಿಸ್‌ನಲ್ಲಿ ಫಿಫಾ ವಿಶ್ವಕಪ್ ಟ್ರೋಫಿಯನ್ನು ಎತ್ತಿ ಹಿಡಿದಿದ್ದ. ಈಗ ಫೈನಲ್‌ನಲ್ಲಿ ಕ್ರೊವೇಷ್ಯಾವನ್ನು ಮಣಿಸಿ ಫ್ರಾನ್ಸ್ ಮತ್ತೊಮ್ಮೆ ವಿಶ್ವಕಪ್ ಗೆಲ್ಲಲು ಡಿಸ್ಚಾಂಪ್ಸ್ ಎಂಬ ಕೋಚ್ ಕಾರಣನಾಗಿದ್ದಾನೆ. ಹೀಗೆ ದಾಖಲೆ ಮಾಡಿದ ವಿಶ್ವದ ಎರಡನೇ ಫುಟ್‌ಬಾಲ್ ಆಟಗಾರನೀತ. ಈ ಹಿಂದೆ 1974ರಲ್ಲಿ ಪಶ್ಚಿಮ ಜರ್ಮನಿ ವಿಶ್ವಕಪ್ ಗೆದ್ದಾಗ ಫ್ರಾನ್ಜ್ ಬೆಕೆನ್ಬರ್ ತಂಡದ ನಾಯಕನಾಗಿದ್ದ; ಆ ಬಳಿಕ 1990ರಲ್ಲಿ ಆತ ಕೋಚ್ ಆಗಿದ್ದಾಗ ಪಶ್ಚಿಮ ಜರ್ಮನಿ ಮತ್ತೊಮ್ಮೆ ವಿಶ್ವಕಪ್ ಗೆದ್ದುಕೊಂಡಿತ್ತು.

ಈ ರೀತಿ ಫುಟ್‌ಬಾಲ್‌ನಲ್ಲಿ ಡಬಲ್ಸ್ ವಿಕ್ರಮ ಸಾಧಿಸುವುದು ಬಹಳ ಅಪರೂಪದ ಸಂಗತಿ. ಫುಟ್‌ಬಾಲ್ ತಂಡದ ಆಟಗಾರ ಮತ್ತು ಕೋಚ್ ಆಗಿ ಇಂತಹ ಸಾಧನೆಯನ್ನು ಮಾಡಿದ ಇನ್ನೊಬ್ಬಾತ ಮಾರಿಯೊ ಜಗೆಲ್ಲೊ. ಆತ 1958 ಮತ್ತು 1962ರಲ್ಲಿ ಫುಟ್‌ಬಾಲ್ ವಿಶ್ವಕಪ್ ಗೆದ್ದ ಬ್ರೆಝಿಲ್ ತಂಡದ ಆಟಗಾರನಾಗಿದ್ದ. ಮುಂದೆ 1970ರಲ್ಲಿ ಬ್ರೆಜಿಲ್ ಮತ್ತೊಮ್ಮೆ ವಿಶ್ವಕಪ್ ಗೆದ್ದಾಗ ಆತ ಇನ್‌ಚಾರ್ಜ್ ಮ್ಯಾನೇಜರ್ ಆಗಿದ್ದ.

ಡಿಡಿಯರ್ ಡಿಸ್ಚಾಂಪ್ಸ್‌ಗೀಗ 49ರ ಹರೆಯ. (ಬರ್ತ್‌ಡೇ 15.10.1968) ಕ್ಲಬ್ ಆಟಗಾರನಾಗಿಯೂ ಈತನಷ್ಟು ಮಿಂಚಿದ ಇನ್ನೊಬ್ಬಾತ ಇಲ್ಲ. ಮಾರ್ಸಿಲೀ ತಂಡದ ನಾಯಕನಾಗಿ ಎರಡು ಬಾರಿ ಫ್ರೆಂಚ್ ಕಪ್ ಮತ್ತು ಒಮ್ಮೆ ಚಾಂಪಿಯನ್ಸ್ ಲೀಗ್ ಕಪ್ ಎತ್ತಿಹಿಡಿದ ಈತ, ಅದಕ್ಕೂ ಮುನ್ನ ಜುವೆಂಟಸ್ ತಂಡವು ಯೂರೋಪಿಯನ್ ಕಪ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ.

ಫ್ರಾನ್ಸ್ ರಾಷ್ಟ್ರೀಯ ತಂಡದ ಕೋಚ್ ಆಗುವುದಕ್ಕೆ ಮುನ್ನ ಹಲವು ಕ್ಲಬ್ ತಂಡಗಳನ್ನು ಪ್ರಶಸ್ತಿ ಗೆಲ್ಲಿಸಿದ ಕೀರ್ತಿಯೂ ಈತನದ್ದು. 2004ರಲ್ಲಿ ಈತ ಕೋಚ್ ಆಗಿದ್ದ ಮೊನಾಕೊ ಕ್ಲಬ್ ಯೂರೋಪಿಯನ್ ಲೀಗ್ ಫೈನಲ್ ತಲುಪಿತ್ತು. ಮ್ಯಾಚ್ ಫಿಕ್ಸಿಂಗ್ ಹಗರಣದಲ್ಲಿ ಮಂಕಾಗಿದ್ದ ಜುವೆಂಟಸ್ ಕ್ಲಬ್ ತಂಡದ ಕೋಚ್ ಆಗಿ ಈತ ತಂಡವನ್ನು ಚಾಂಪಿಯನ್ಸ್ ಲೀಗ್ ಅಗ್ರಸ್ಥಾನಕ್ಕೇರಿಸಿದ್ದ. ಬಳಿಕ ಮಾರ್ಸಿಲೀ ತಂಡದ ಕೋಚ್ ಆಗಿ ಲೀಗ್ ಒನ್ ಟೈಟಲ್ ಗೆಲ್ಲಿಸಿದ್ದ.

2012ರಲ್ಲಿ ಫ್ರಾನ್ಸ್ ತಂಡದ ಹೆಡ್‌ಕೋಚ್ ಆದ ಡಿಸ್ಚಾಂಪ್ಸ್, ತನ್ನ ಹುದ್ದೆಯನ್ನು ತ್ಯಜಿಸಲಿದ್ದಾನೆಂದು ಹಲವು ಸಲ ಮಾಧ್ಯಮಗಳು ಭವಿಷ್ಯ ನುಡಿದಿದ್ದವು. ದೇಶದಲ್ಲಿರುವ ಅತ್ಯುತ್ತಮ ಫುಟ್‌ಬಾಲ್ ಪ್ರತಿಭೆಗಳನ್ನು ಬಯಲಿಗೆಳೆಯುವುದು ಈತನಿಂದ ಸಾಧ್ಯವಿಲ್ಲ ಎಂದು ಕೆಲವು ಎಕ್ಸ್‌ಪರ್ಟ್‌ಗಳೂ ಷರಾ ಬರೆದಿದ್ದರು. ಆದರೆ ತಂಡದ ತರಬೇತಿಯಲ್ಲಿ ಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡು, ಹಲವು ಚಾಣಾಕ್ಷ ಆಟಗಾರರನ್ನು ಗುರುತಿಸಿ ಸೂಕ್ತ ಸ್ಥಾನದಲ್ಲಿ ಬಳಸಿದ ಕೀರ್ತಿ ಈಗ ಈತನದ್ದಾಗಿದೆ.

ವಿಶ್ವಕಪ್ ಆರಂಭವಾಗುವುದಕ್ಕೆ ಮುನ್ನ ಈತನನ್ನು ಬದಲಿಸಿ ಜೈನುದ್ದೀನ್ ಜಿದಾನೆಯನ್ನು ನೇಮಿಸಲಾಗುವುದು ಎಂಬ ಸುದ್ದಿಯೂ ಹಬ್ಬಿತ್ತು. ಆಗ 'ನಾನು ಸದ್ಯಕ್ಕೆ ನಿವೃತ್ತನಾಗುವ ಆಲೋಚನೆ ಇಲ್ಲ' ಎಂದು ಡಿಸ್ಚಾಂಪ್ಸ್ ಸ್ಪಷ್ಟೀಕರಣ ನೀಡಿದ್ದ. 'ನನಗೆ ಒಂದು ಗುರಿ ನೀಡಲಾಗಿದೆ. ಅದನ್ನು ಪೂರ್ಣಗೊಳಿಸದೆ ನಾನು ವಿರಮಿಸುವುದಿಲ್ಲ. ಅದೂ ಅಲ್ಲದೆ ಫ್ರಾನ್ಸ್ ಫುಟ್‌ಬಾಲ್ ಅಸೋಸಿಯೇಷನ್‌ನ ಅಧ್ಯಕ್ಷರು ನನ್ನ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ದ್ರೋಹ ಬಗೆಯಲಾರೆ' ಎಂದು ಡಿಸ್ಚಾಂಪ್ಸ್ ಖಡಕ್ ಆಗಿ ಹೇಳಿದ್ದ.

ಫ್ರಾನ್ಸ್ ನಾಯಕನಾಗಿ ಒಟ್ಟು 103 ಪಂದ್ಯಗಳಲ್ಲಿ ತಂಡವನ್ನು ಈ ಹಿಂದೆ ಮುನ್ನಡೆಸಿದ್ದ ಡಿಸ್ಚಾಂಪ್ಸ್ ಅತ್ಯುತ್ತಮ ಮಿಡ್‌ಫೀಲ್ಡರ್ ಆಗಿದ್ದ. ಯೂರೋಪಿಯನ್ ಕಪ್ ತಂಡದಲ್ಲೂ ಆಟಗಾರನಾಗಿದ್ದ. 2012ರಲ್ಲಿ ಆಟಗಾರನಾಗಿ ನಿವೃತ್ತಿ ಹೊಂದಿದ್ದ. ಫ್ರಾನ್ಸ್ ತಂಡದ ಮ್ಯಾನೇಜರ್ ಆಗಿಯೂ ಈತನಷ್ಟು ದೀರ್ಘ ಅವಧಿಗೆ ಸೇವೆ ಸಲ್ಲಿಸಲು ಇನ್ನೊಬ್ಬರಿಗೆ ಆಗಿಲ್ಲ. ಮೊನ್ನೆ ವಿಶ್ವಕಪ್‌ನಲ್ಲಿ ಬೆಲ್ಜಿಯಂ ವಿರುದ್ಧ ಫ್ರಾನ್ಸ್ ಆಟವಾಡಿ ಗೆದ್ದಾಗ ಈತನ ನೇತೃತ್ವದಲ್ಲಿ ಫ್ರಾನ್ಸ್ ಆಡಿದ 82ನೇ ಪಂದ್ಯವಾಗಿತ್ತದು.

ಕಳೆದ ವಾರ ನಡೆದ ಕ್ರೊವೇಷ್ಯಾ ವಿರುದ್ಧದ ಫೈನಲ್‌ನಲ್ಲಿ ತನ್ನ ತಂಡದ ತಂತ್ರಗಾರಿಕೆಯನ್ನು ಚಾಣಾಕ್ಷತೆಯಿಂದ ರೂಪಿಸಿದ ಡಿಸ್ಚಾಂಪ್ಸ್, ಕಾಲಿಗೆ ಚೆಂಡು ಸಿಕ್ಕಿದ ತಕ್ಷಣ ಪಾಸ್ ಮಾಡಬೇಕೆಂದು ಆಟಗಾರರಿಗೆ ಪದೇ ಪದೇ ಎಚ್ಚರಿಸಿದ್ದ. 'ಕ್ರೊವೇಷ್ಯಾ ತಂಡದ ಆಟಗಾರರು ಆಕ್ರಮಣದ ಮೇಲೆ ಹೆಚ್ಚು ಗಮನ ಕೊಡುತ್ತಾರೆ, ನೀವು ಕೂಲ್ ಆಗಿ ಸರಳ ಆಟವಾಡಿ' ಎಂದು ಸರಿಯಾಗಿ ಊಹಿಸಿ ಹೇಳಿದ್ದ. ಅದರಲ್ಲೂ 'ಹಾಫ್ ಟೈಮ್' ಬಳಿಕ ಆತ ಡ್ರೆಸ್‌ರೂಮ್‌ನಲ್ಲಿ 'ಚೆಂಡನ್ನು ಕಿಲಿಯನ್‌ಗೆ ಕೊಡಿ' ಎಂದು ಕಿವಿ ಮಾತು ಹೇಳಿದ್ದು ಫಲ ಕೊಟ್ಟಂತೆ, ಕಿಲಿಯನ್ ಎಂಬಾಪೆ ಚೆಂಡು ಪಡೆದು ವಿಜಯದ ಗೋಲು ದಾಖಲಿಸಿದ್ದ. ಸದ್ಯಕ್ಕಂತೂ ಡಿಸ್ಚಾಂಪ್ಸ್ ಫುಟ್‌ಬಾಲ್ ಜಗತ್ತಿನ ಅತ್ಯಂತ ಜನಪ್ರಿಯ ಹೆಸರು. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65